# ಹರಿಯೆಂದು ಮನದಲ್ಲಿ ಮರೆದೊಮ್ಮೆ ನೆನೆದರೆ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru, page No. 8
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 400
3. **Note:** The wordings, mentioned without highlights, are as per Ref. 1. The wordings in Ref. 2 are almost similar to Ref. 1 except few wordings which are not considered here.
4. **Note:** Singer has followed the lyrics as in Ref. 2.

ರಾಗ: ಬಿಲಹರಿ ತಾಳ: ತ್ರಿವಿಡಿ

ಹರಿಯೆಂದು ಮನದಲ್ಲಿ ಮರೆದೊಮ್ಮೆ ನೆನೆದರೆ
ದುರಿತ ಪರ್ವತಗಳ ಖಂಡಿಪುದು ವಜ್ರದಂತೆ || ಪ ||

ಮೇರು ಸುವರ್ಣ ದಾನವ ಮಾಡಲು ಪುಣ್ಯ
ನೂರು ಕನ್ಯಾ ದಾನವ ಮಾಡಲು
ಧಾರಿಣಿಯೆಲ್ಲವ ಧಾರೆಯನೆರೆಯಲು
ನಾರಾಯಣ ಸ್ಮರಣೆಗೆ ಸರಿಯಹುದೆ || 1 ||

ಹತ್ತು ಲಕ್ಷ ಗೋದಾನ ಮಾಡಲು ಪುಣ್ಯ-
ವ್ರತಗಳ ಅನುದಿನ ಆಚರಿಸಲು
ಶತಕೋಟಿ ಯಜ್ಞವ ಮಾಡಲು ಲಕ್ಷ್ಮೀ-
ಪತಿ ನಾಮ ಸ್ಮರಣೆಗೆ ಸರಿಯೆನ್ನಬಹುದೆ || 2 ||

ಗಂಗೆ ಕಾಳಿಂದಿ ಗೋದಾವರಿ ಕಾವೇರಿ
ತುಂಗಭದ್ರೆಯಲಿ ಸ್ನಾನವ ಮಾಡೆ
ಮಂಗಳ ಮೂರುತಿ ಪುರಂದರ ವಿಠ್ಠಲ
ರಂಗನ ಸ್ಮರಣೆಗೆ ಸರಿಯೆನ್ನಬಹುದೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮೇರು ಸುವರ್ಣದಾನ** – ಬಂಗಾರದ ನಾಣ್ಯಗಳನ್ನು ಬೆಟ್ಟದಂತೆ ಸುರಿದು, ದಾನ ಮಾಡುವುದು.

**ಧಾರುಣಿಯೆಲ್ಲವ** – ಭೂದಾನ.

**ಮರೆದು** = ಗೊತ್ತಿಲ್ಲದೆ

**ವಜ್ರ** = ಇಂದ್ರನ ಆಯುಧ. ಪರ್ವತಗಳಿಗೆ ಮೊದಲು ರೆಕ್ಕೆಗಳಿದ್ದವೆಂದು, ಅವು ಹಾರಿ ಹಾರಿ ಲೋಕಕ್ಕೆ ತೊಂದರೆ ಕೊಡತೊಡಗಿದಾಗ ಇಂದ್ರನು ತನ್ನ ವಜ್ರಾಯುಧದಿಂದ ಅವುಗಳ ರೆಕ್ಕೆ ಗಳನ್ನು ಕಡಿದು ಹಾಕಿದನೆಂತಲೂ ಪುರಾಣ ಕಥೆಗಳು ಹೇಳುತ್ತಿವೆ. ರೆಕ್ಕೆಗಳು ಹೋದಮೇಲೆ ಪರ್ವತಗಳು ಅಚಲವಾದುವು.

**ಮೇರು** = ಭೂಮಿಯ ಕೇಂದ್ರ ಸ್ಥಾನದಲ್ಲಿರುವ ಪೌರಾಣಿಕ ಪರ್ವತ. ಇದು ಸುವರ್ಣಮಯ ವಾಗಿರುವುದೆಂದೂ ಇದರ ಸುತ್ತಲೂ ಎಲ್ಲಾ ಗ್ರಹಗಳು ತಿರುಗುತ್ತವೆಂದೂ ನಂಬಿಕೆ.

**ಕಾಳಿಂದಿ** = ಯಮುನೆ

**Classification:** Keerthane
**Ankita:** purandara vittala
**Location:** Srirangam, TN
**Category:** Mukti Marga, Nama Mahatme
**Sub-Category:** Krishna, bangara, vajra, dana, punya, Lakshmi, bhumi, Vishnu, smarane, vrata, yagna, pati, gange, nadi, snana, mangala, ranga, mukti, parvata, Narayana, govu,
**Pravachana:** NA
**Explanation:** NA